# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಎಸ್‌ಹೆಚ್‌ಎಲ್‌ಸಿಸಿ ಮತ್ತು ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ ಅರ್ಜಿದಾರರುಗಳಿಂದ ಪಡೆಯುತ್ತಿರುವ ಪರಿಷ್ಕೃತ ಪ್ರೋಸೆಸಿಂಗ್ ಫೀಯನ್ನು ಒಂದೇ ಕಂತಿನಲ್ಲಿ ಪಡೆಯಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಸಿಐ 44 ಎಸ್‌ಎಸ್‌ಐ 2014, ದಿನಾಂಕ: 12.08.2015, 21.08.2015 ಮತ್ತು 29.08.2015.

2) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಉಮಿ/ಎ1/ ಪ್ರೋಫೀ/2016-17, ದಿನಾಂಕ: 29.11.2016.

-:O:-

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು SHLCC / SLSWCC ಅನುಮೋದನೆಗಾಗಿ ಯೋಜನೆಗಳ ಅರ್ಜಿದಾರರಿಂದ ಪಡೆಯುತ್ತಿರುವ ಪರಿಷ್ಕೃತ ಪ್ರೋಸೆಸಿಂಗ್ ಫೀಯನ್ನು ಎರಡು ಹಂತಗಳಲ್ಲಿ ಅಂದರೆ, ಶೇ.50 ರಷ್ಟು ಪ್ರೋಸೆಸಿಂಗ್ ಫೀಯನ್ನು ಯೋಜನಾ ಪ್ರವರ್ತಕರು ಮೊದಲನೇ ಹಂತದ ಇ-ಉದ್ಯಮಿ ಮೂಲಕ SHLCC / SLSWCC ಸಭೆಗಳ ಅನುಮೋದನೆಗಾಗಿ ಕೋರಿಕೆ ಸಲ್ಲಿಸುವ ಪೂರ್ವದಲ್ಲಿ ಹಾಗೂ ಉಳಿದ ಶೇ.50 ರಷ್ಟು ಪ್ರೋಸೆಸಿಂಗ್ ಫೀಯನ್ನು ಯೋಜನಾ ಪ್ರವರ್ತಕರು ಎರಡನೇ ಹಂತದ ಇ-ಉದ್ಯಮಿ ಮೂಲಕ ಇತರೆ ಇಲಾಖೆಗಳಿಂದ ಅನುಮೋದನೆ / ಎನ್‌ಓಸಿ / ಒಪ್ಪಿಗೆ ಇತ್ಯಾದಿಗಳಿಗೆ ಕೋರಿಕೆ ಸಲ್ಲಿಸುವ ಪೂರ್ವದಲ್ಲಿ ಈ ಕೆಳಕಂಡಂತೆ ಸ್ವೀಕರಿಸಲು ಆದೇಶಿಸಲಾಗಿದೆ.

**ಪ್ರೋಸೆಸಿಂಗ್ ಫೀ**

| **Project Cost** | **For General Category/ NRI entrepreneurs (Exclusive of ST)** | **For SC/ST, Women, Minorities, Backward classes (1 & 2A), Physically challenged, Ex-Servicemen Category Entrepreneurs (% concession)** |
|---|---|---|
| Projects above Rs.15 crore and upto Rs.30 crore | Rs.20,000/- | 50% |
| Projects above Rs.30 crore and upto Rs.50 crore | Rs.40,000/- | 50% |
| Projects above Rs.50 crore and upto Rs.100 crore | Rs.1,00,000/- | 50% |
| Projects above Rs.100 crore and upto Rs.250 crore | Rs.2,00,000/- | 50% |
| Projects above Rs.250 crore and upto Rs.500 crore | Rs.3,00,000/- | 50% |
| Projects above Rs.500 crore and upto Rs.1000 crore | Rs.4,50,000/- | 50% |
| Projects above Rs.1000 crore and upto Rs.5000 crore | Rs.7,50,000/- | 50% |
| Projects above Rs.5000 crore | Rs.15,00,000/- | 50% |
| For Government / PSU Projects | Free | |

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC) ಮತ್ತು ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ (SLSWCC) ಗಳ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿರುತ್ತದೆ. ಸಂಸ್ಥೆಯ ನಿರ್ವಹಣೆಗಾಗಿ ಅರ್ಜಿದಾರರಿಂದ ಪಡೆಯುತ್ತಿದ್ದ Processing fee ಯನ್ನು ಪರಿಷ್ಕರಿಸಿದ್ದು, ಸಂಸ್ಥೆಯು ಈ ಹಿಂದೆ ಅರ್ಜಿದಾರರಿಂದ ಪಡೆಯುತ್ತಿದ್ದ ಪ್ರೋಸೆಸಿಂಗ್ ಫೀ ಗೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ: ಸಿಐ 44 ಎಸ್‌ಎಸ್‌ಐ 2014, ದಿನಾಂಕ: 12.08.2015 ರನ್ವಯ ಗರಿಷ್ಠ 50 ರಷ್ಟು ಕಡಿತಗೊಳಿಸಲಾಗಿದೆ ಹಾಗೂ ಪ್ರಸ್ತುತ ಸಂಸ್ಥೆಯು ವಿವಿಧ ಯೋಜನೆಗಳ ಅರ್ಜಿದಾರರಿಂದ ಎರಡು ಕಂತುಗಳಲ್ಲಿ ಪ್ರೋಸೆಸಿಂಗ್ ಫೀಯನ್ನು ವಸೂಲಿ ಮಾಡುವ ಪದ್ಧತಿ ಇದ್ದು, ಹೆಚ್ಚಿನ ಅರ್ಜಿದಾರರು ಮೊದಲನೇ ಕಂತಿನ ಹಣವನ್ನು ಮಾತ್ರ ತುಂಬುತ್ತಿರುತ್ತಾರೆ ಹಾಗೂ ಎರಡನೇ ಕಂತಿನ ಹಣವನ್ನು ಪಾವತಿ ಮಾಡುತ್ತಿರುವುದಿಲ್ಲ. ಆದಕಾರಣ ಸಂಸ್ಥೆಗೆ ಬರುವ ಆದಾಯದಲ್ಲಿ ಕಡಿತವಾಗಿದೆ ಎಂದು ತಿಳಿಸಿರುತ್ತಾರೆ.

ಅಲ್ಲದೇ, ಸಂಸ್ಥೆಯ ಅಧಿಕಾರಿಗಳ ವೇತನ, ಕಟ್ಟಡ ಬಾಡಿಗೆ, ಇಂಧನ ವೆಚ್ಚಗಳ ಬಾಬ್ತು ರೂ.2.50 ಕೋಟಿ ಅನುದಾನವನ್ನು 2015-16ನೇ ಸಾಲಿನಿಂದ ಮಂಜೂರು ಮಾಡುತ್ತಿದ್ದು, ಉಳಿದಂತೆ ಸಂಸ್ಥೆಯ ಹೊರಗುತ್ತಿಗೆ ನೌಕರರ ವೇತನ, ಕಟ್ಟಡ ನಿರ್ವಹಣೆ, ಪ್ರಯಾಣ ವೆಚ್ಚ (ವಿಮಾನ ಪ್ರಯಾಣ ಸೇರಿ) ವಿವಿಧ ಸಭೆ ಸಮಾರಂಭಗಳ ಖರ್ಚು, ಕೋರಿಯರ್, ಉಡುಗೊರೆ, ದೂರವಾಣಿ, ಮೊಬೈಲ್, ಇಂಟರ್‌ನೆಟ್ ಇತ್ಯಾದಿಗಳಿಗೆ ಮಾಸಿಕ ರೂ. 25 ರಿಂದ 30 ಲಕ್ಷಗಳಷ್ಟು ಖರ್ಚಾಗುತ್ತಿದ್ದು, ಪ್ರಸ್ತುತ ಸಂಸ್ಥೆಗೆ ಬರುತ್ತಿರುವ ಆದಾಯದಿಂದ ಭರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರಿ ಆದೇಶ ಸಂಖ್ಯೆ: ಸಿಐ 44 ಎಸ್‌ಎಸ್‌ಐ 2014, ದಿನಾಂಕ: 12.08.2015 ರಲ್ಲಿ ನಿಗದಿಪಡಿಸಿರುವ ಒಟ್ಟು ಪ್ರೋಸೆಸಿಂಗ್ ಫೀಯನ್ನು ಒಂದೇ ಕಂತಿನಲ್ಲಿ ಪಡೆಯಲು ಅನುಮೋದನೆ ನೀಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಸರ್ಕಾರಿ ಆದೇಶದಲ್ಲಿ, Government/PSU Projects ಗಳಿಗೆ ಪ್ರೊಸೆಸಿಂಗ್ ಫೀಜ್ ಉಚಿತವೆಂದು ಆದೇಶಿಸಿದ್ದು, ಇದರಿಂದಲೂ ಸಹ ಸಂಸ್ಥೆಯ ಆದಾಯ ಕಡಿಮೆ ಆಗಿರುವುದರಿಂದ, ಹಲವು Government/PSU Projects ಗಳಿಗೆ ಸಂಬಂಧಪಟ್ಟ ಸಂಸ್ಥೆಗಳು ಪ್ರೊಸೆಸಿಂಗ್ ಫೀಜ್ ನೀಡಲು ಶಕ್ತವಾಗಿರುವುದರಿಂದ ಹಾಗೂ ಈ ಯೋಜನೆಗಳಿಗೂ ಸಹ ಉದ್ಯೋಗ ಮಿತ್ರದ ಅಧಿಕಾರಿಗಳು ಕೆಲಸ ನಿರ್ವಹಿಸುತ್ತಿರುವುದರಿಂದ ಇವುಗಳಿಂದಲೂ ಸಹ ಪ್ರೊಸೆಸಿಂಗ್ ಫೀಜನ್ನು ಪಡೆಯಬಹುದಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಐ 307 ಎಸ್‌ಪಿಐ 2016, ಬೆಂಗಳೂರು, ದಿನಾಂಕ: 20.12.2016</u>**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉದ್ಯೋಗ ಮಿತ್ರದಲ್ಲಿ ಅನುಮೋದನೆಗಾಗಿ ಸಲ್ಲಿಸುವ ಎಲ್ಲಾ ಪ್ರಸ್ತಾವನೆಗಳಿಗೆ (Government/PSU Projects ಸೇರಿದಂತೆ) ಕೆಳಕಂಡಂತೆ Processing fee ಯನ್ನು ಒಂದೇ ಕಂತಿನಲ್ಲಿ ಪಡೆಯಲು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಅನುಮೋದನೆ ನೀಡಿದೆ.

| Project Cost | For General Category/ NRI entrepreneurs (Exclusive of ST) | For SC/ST, Women, Minorities, Backward classes (1 & 2A), Physically challenged, Ex-Servicemen Category Entrepreneurs (% concession) |
|---|---|---|
| Projects above Rs.15 crore and upto Rs.30 crore | Rs.20,000/- | 50% |
| Projects above Rs.30 crore and upto Rs.50 crore | Rs.40,000/- | 50% |
| Projects above Rs.50 crore and upto Rs.100 crore | Rs.1,00,000/- | 50% |
| Projects above Rs.100 crore and upto Rs.250 crore | Rs.2,00,000/- | 50% |
| Projects above Rs.250 crore and upto Rs.500 crore | Rs.3,00,000/- | 50% |
| Projects above Rs.500 crore and upto Rs.1000 crore | Rs.4,50,000/- | 50% |
| Projects above Rs.1000 crore and upto Rs.5000 crore | Rs.7,50,000/- | 50% |
| Projects above Rs.5000 crore | Rs.15,00,000/- | 50% |

ಉಳಿದಂತೆ, ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಷರತ್ತು/ನಿಬಂಧನೆಗಳು ಹಾಗೇ ಮುಂದುವರೆಯುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

S. Umadevi 20/12/16
(ಎಸ್. ಉಮಾದೇವಿ)
ಪೀಠಾಧಿಕಾರಿ (ತಾಂತ್ರಿಕ ಕೋಶ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 20 ಪ್ರತಿಗಳನ್ನು ಈ ಇಲಾಖೆಗೆ ಕಳುಹಿಸಲು ಕೋರಿದೆ.

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು–01.
3. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು–01.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.
6. ಕರ್ನಾಟಕದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.

7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.
8. ಕರ್ನಾಟಕದ ಎಲ್ಲಾ ಜಿಲ್ಲೆಯ ಜಂಟಿ ನಿರ್ದೇಶಕರುಗಳು, ಜಿಲ್ಲಾ ಕೈಗಾರಿಕಾ ಕೇಂದ್ರ
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1), ವಿಧಾನಸೌಧ, ಬೆಂಗಳೂರು–01.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು–01.
11. ಅಧ್ಯಕ್ಷರು, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ, ನಂ. 1086, ಹೆಚ್‌ಎಎಲ್ 2ನೇ ಹಂತ, 12ನೇ ಮುಖ್ಯರಸ್ತೆ, ಇಂದಿರಾನಗರ, ಬೆಂಗಳೂರು–38.
12. ಅಧ್ಯಕ್ಷರು, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ನಂ. 2/106, 17ನೇ ಅಡ್ಡರಸ್ತೆ, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು–40.
13. ಅಧ್ಯಕ್ಷರು, ಪೀಣ್ಯ ಕೈಗಾರಿಕಾ ಸಂಘ, 1ನೇ ಅಡ್ಡರಸ್ತೆ, 1ನೇ ಹಂತ, ಪೀಣ್ಯ ಕೈಗಾರಿಕಾ ಎಸ್ಟೇಟ್, ಬೆಂಗಳೂರು–58.
14. ಅಧ್ಯಕ್ಷರು, ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ & ಕಾಮರ್ಸ್, ಶರೀಫ್ ಚೇಂಬರ್ಸ್, ನಂ. 3/4, 3ನೇ ಮಹಡಿ, "ಸಿ" ಬ್ಲಾಕ್, ಯೂನಿಟಿ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು–02.
15. ಅಧ್ಯಕ್ಷರು, ಎಲೆಕ್ಟ್ರಾನಿಕ್ ಸಿಟಿ ಇಂಡಸ್ಟ್ರೀಸ್ ಅಸೋಸಿಯೇಷನ್, ಸ.ನಂ.7(ಪಿ), ELCIA ಕಾಂಪ್ಲೆಕ್ಸ್, ಎಲೆಕ್ಟ್ರಾನಿಕ್ ಸಿಟಿ ವೆಸ್ಟ್ ಫೇಸ್, ಹೋಸೂರ್ ರಸ್ತೆ, ಬೆಂಗಳೂರು–100.
16. ಅಧ್ಯಕ್ಷರು, ಎಫ್‌ಕೆಸಿಸಿಐ, ಚೇಂಬರ್ ಆಫ್ ಕಾಮರ್ಸ್ ಕಟ್ಟಡ, ಪಿ.ಬಿ. ನಂ. 9996, ಕೆ.ಜಿ. ರಸ್ತೆ, ಬೆಂಗಳೂರು–09.
17. ಅಧ್ಯಕ್ಷರು, ಅವೇಕ್, ನಂ. ಬಿ–76, ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ಎಸ್ಟೇಟ್, ರಾಜಾಜಿನಗರ, ಬೆಂಗಳೂರು–10.
18. ಅಧ್ಯಕ್ಷರು, ಲಘು ಉದ್ಯೋಗ ಭಾರತಿ, ನಂ. 15/47, 47ನೇ "ಎ" ಕ್ರಾಸ್, 8ನೇ ಬ್ಲಾಕ್, ಜಯನಗರ, ಜೆಲ್ಲಿ ಅಪಾರ್ಟ್‌ಮೆಂಟ್ ಹತ್ತಿರ, ಬೆಂಗಳೂರು–82.
19. ಅಧ್ಯಕ್ಷರು, ಎಫ್‌ಐಸಿಸಿಐ, ವಿಐಟಿಸಿ ಬಿಲ್ಡಿಂಗ್, 1ನೇ ಮಹಡಿ, ಕಸ್ತೂರ್ ಬಾ ರಸ್ತೆ, ಬೆಂಗಳೂರು–01.
20. ರೀಜನಲ್ ಮ್ಯಾನೇಜರ್, NASSCOM, ಜೆಎಸ್‌ಎಸ್ ಇನ್ಸ್ಟಿಟ್ಯೂಷನ್ ಕಾಂಪ್ಲೆಕ್ಸ್, 1ನೇ ಮಹಡಿ, ಸಿಎ–1, ಹೆಚ್‌ಎಎಲ್ 3ನೇ ಹಂತ, ಬಿಹೈಂಡ್ ಹೋಟೆಲ್ ಲೀಲಾ ಪ್ಯಾಲೇಸ್, ಕೋಡಿಹಳ್ಳಿ, ಬೆಂಗಳೂರು–08.
21. ಕೋ–ಚೇರ್ಮನ್, ASSOCHAM, ಸದರನ್ ರೀಜನ್ ಆಫೀಸ್, ಡಿ–13,14, 'ಡಿ' ಬ್ಲಾಕ್, ಬ್ರಿಗೇಡ್ ಎಂಎಂ 2ನೇ ಮಹಡಿ, 7ನೇ ಬ್ಲಾಕ್, ಜಯನಗರ, ಕೆ.ಆರ್. ರೋಡ್, ಬೆಂಗಳೂರು–17.
22. ಅಧ್ಯಕ್ಷರು, Consortium of Electronic Industries of Karnataka Nakshatra, 91 ಮತ್ತು 91/1, ನೆಲಮಹಡಿ, AECS ಲೇಔಟ್, ಪೋಸ್ಟ್ ಆಫೀಸ್ ರೋಡ್, ಸಂಜಯನಗರ, ಬೆಂಗಳೂರು–94.
23. ಅಧ್ಯಕ್ಷರು, ಬೊಮ್ಮಸಂದ್ರ ಇಂಡಸ್ಟ್ರೀಸ್ ಅಸೋಸಿಯೇಷನ್, ಕೆಐಎಡಿಬಿ ಕಾಂಪ್ಲೆಕ್ಸ್, 2ನೇ ಮಹಡಿ ಅಬೋವ್ ಕೆನರಾ ಬ್ಯಾಂಕ್, ಹೋಸೂರ್ ರೋಡ್, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಬೆಂಗಳೂರು–99.
24. ಅಧ್ಯಕ್ಷರು, Society of Indian Aerospace Technologies and Industries, ಏರೋನ್ಯಾಟಿಕಲ್ ಸೊಸೈಟಿ ಬಿಲ್ಡಿಂಗ್, ಸುರಂಜನ್‌ದಾಸ್ ರೋಡ್, ಓಲ್ಡ್ ಮದರಾಸ್ ರೋಡ್, ಬೆಂಗಳೂರು–75.
25. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.